# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಾರವಾರ

ಸಿ.ಸಿ. ನಂ. : 116/2021

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಚೇತನ | ಪಿ.ಡಬ್ಲ್ಯೂ: 1 |
| ತಂದೆಯ ಹೆಸರು | : | ಸದಾನಂದ ನಾಯ್ಕ | ಸಿ.ಡಬ್ಲ್ಯೂ: 1 |
| ವಯಸ್ಸು | : | 34 ವರ್ಷ | |
| ಉದ್ಯೋಗ | : | ಖಾಸಗಿ ಕಂಪನಿಯಲ್ಲಿ ಕೆಲಸ | |
| ವಾಸ್ತವ್ಯ | : | ಪಣಜಿ | |

ಸತ್ಯ ಪ್ರತಿಜ್ಞೆಯ ಮೇರೆಗೆಃ 12-07-2022

## ಕಲಂ. 299 ರಡಿಯಲ್ಲಿ ಸಾಕ್ಷಿಯ ಸಾಕ್ಷ್ಯ ವಿಚಾರಣೆ

**ಮುಖ್ಯ ವಿಚಾರಣೆಃ ಮಾನ್ಯ ಹಿರಿಯ ಸ.ಸ.ಅ. ರವರಿಂದಃ**

ಕಾರವಾರದ ಕೊಡಿಬಾಗದಲ್ಲಿ ದುರ್ಗಾದೇವಿ ದೇವಸ್ಥಾನದ ಹತ್ತಿರ ನಮ್ಮ ತಂದೆಗೆ ಸೇರಿದ ಒಂದು ಮನೆ ಇರುತ್ತದೆ. ಅ ಮನೆಯಲ್ಲಿ ನನ್ನ ತಂದೆ ತಾಯಿ ವಾಸವಾಗಿರುತ್ತಾರೆ. ನಾನು ಪಣಜಿಯಿಂದ ಕಾರವಾರಕ್ಕೆ ತಿಂಗಳಿಗೊಮ್ಮೆ ಬಂದು ನಮ್ಮ ತಂದೆ ತಾಯಿ ಮತ್ತು ಮನೆ ನೋಡಿಕೊಂಡು ವಾಪಸ್ಸು ಹೋಗುತ್ತೇನೆ. ದಿಃ 31-05-2016 ರಂದು ನಮ್ಮ ತಂದೆ ತಾಯಿ ಮನೆಗೆ ಬೀಗ ಹಾಕಿಕೊಂಡು ನನ್ನ ಅಕ್ಕ ಶ್ವೇತಾ ಇವರ ಮನೆಗೆ ಹೋಗಿದ್ದರು.

ದಿಃ 15-06-2016 ರಂದು ಬೆಳಿಗ್ಗೆ 11-00 ಗಂಟೆಗೆ ಫೋನ್ ಮಾಡಿ ಪಕ್ಕದ ಮನೆಯ ರಮೇಶ ಇವರು ನಮ್ಮ ಮನೆಗೆ ಕಳ್ಳತ ಆದ ಬಗ್ಗೆ ತಿಳಿಸಿರುತ್ತಾರೆ ಹೋಗಿ ನೋಡು ಎಂದು ತಿಳಿಸಿದರು. ನಾನು 2-30 ಕ್ಕೆ ಪಣಜಿಯಿಂದ ಕಾರವಾರಕ್ಕೆ ಬಂದು ನೋಡಿದಾಗ ಮನೆಯ ಬೀಗವನ್ನು ಮುರಿದಿದ್ದು, ಮನೆಯ ಒಳಗಡೆ ಇದ್ದ ಎರಡು ಕಪಾಟಿನ ಬಾಗಿಲನ್ನು ಮುರಿದಿರುವುದು ಕಂಡು ಬಂತು. ನಾನು ಪರಿಶೀಲಿಸಿದಾಗ ಮನೆಯಲ್ಲಿ ಇಟ್ಟಿದ್ದ ಬಟ್ಟೆಗಳು

ಚಲ್ಲಾಪಿಲ್ಲಿಯಾಗಿ ಬಿದ್ದಿರುವುದು ಕಂಡು ಬಂತು. ನಮ್ಮ ಮನೆಯಲ್ಲಿಟ್ಟಿದ್ದ ಎರಡು ಬಂಗಾರದ ಕಿವಿ ಒಲೆಗಳು, ಒಂದು ಜೊತೆ ಕುಡುಕು, ಒಂದು ಜೊತೆ ಕಿವಿಯ ರಿಂಗ್, 5 ಉಂಗುರಗಳು , ಒಂದು ಚೌಕಾಕಾರದ ಬಂಗಾರದ ಗಟ್ಟಿ, ಒಂದು ವೃತ್ತಾಕಾರದ ಬಂಗಾರದ ಗಟ್ಟಿ ಮತ್ತು 3000 ನಗದು ಹಣ ಕಳ್ಳತನ ಆಗಿರುವುದು ಕಂಡು ಬಂತು.

ಆದ ಕಾರಣ ನಾನು ಅದೇ ದಿನ ಸಂಜೆ 4-15 ಕ್ಕೆ ಪೊಲೀಸ್ ಠಾಣೆಗೆ ಹೋಗಿ ದೂರು ದಾಖಲು ಮಾಡಿರುತ್ತೇನೆ. ಸದ್ರಿ ದೂರನ್ನು ಈಗ ನೋಡುತ್ತಿದ್ದು ಅದು ಜೆರಾಕ್ಸ ಪ್ರತಿಯಾಗಿದ್ದರಿಂದ ನಿಷಾನೆಯಾಗಿ ಗುರುತಿಸಿಲ್ಲ. ದೂರು ಕೊಟ್ಟ ನಂತರ ಅದೇ ದಿನ ಪೊಲೀಸರು ಕಳ್ಳತನ ಆದ ನಮ್ಮ ಮನೆಗೆ ಬಂದು ನಾನು ತೋರಿಸಿದ ಸ್ಥಳದಲ್ಲಿ ಸಂಜೆ 5-15 ರಿಂದ 6-15ರ ತನಕ ಸ್ಥಳ ಪಂಚನಾಮೆ ಜರುಗಿಸಿ ನಕಾಶೆ ತಯಾರಿಸಿ ನನ್ನ ಸಹಿಗಳನ್ನು ಪಡೆದುಕೊಂಡು ಹೋಗಿರುತ್ತಾರೆ. ಸ್ಥಳ ಪಂಚನಾಮೆಯನ್ನು ಈಗ ನೋಡುತ್ತಿದ್ದು ಅದು ಜೆರಾಕ್ಸ ಪ್ರತಿಯಾಗಿದ್ದರಿಂದ ನಿಷಾನೆಯಾಗಿ ಗುರುತಿಸಿಲ್ಲ. ನಕಾಶೆಯನ್ನು ಈಗ ನೋಡುತ್ತಿದ್ದು ಅದು ಜೆರಾಕ್ಸ ಪ್ರತಿಯಾಗಿದ್ದರಿಂದ ನಿಷಾನೆಯುಾಗಿ ಗುರುತಿಸಿಲ್ಲ. ಪೊಲೀಸರು ನನ್ನನ್ನು ಠಾಣೆಗೆ ಕರೆಯಿಸಿ ಕಳ್ಳತನ ಮಾಡಿದ 40 ಗ್ರಾಂ. ಬಂಗಾರ ಸಿಕ್ಕಿದೆ ಎಂದು ಹೇಳಿ ಆರೋಪಿಗಳು ಆಭರಣಗಳನ್ನು ಕರಗಿಸಿ ಗಟ್ಟಿ ಮಾಡಿರುತ್ತಾರೆ ಎಂದು ತಿಳಿಸಿ ಆರೋಪಿರನ್ನು ತೋರಿಸಿದರು. ಆಗ ನಾನು ಆರೋಪಿತರನ್ನು ಮತ್ತು ಬಂಗಾರದ ಗಟ್ಟಿಯನ್ನು ನೋಡಿ ಗುರುತಿಸಿ ಪೊಲೀಸರ ಮುಂದೆ ಮರು ಹೇಳಿಕೆ ಕೊಟ್ಟಿರುತ್ತೇನೆ. ಆರೋಪಿಗಳನ್ನು ಮತ್ತು ಬಂಗಾರದ ಗಟ್ಟಿಯನ್ನು ಪುನಃ ನೋಡಿದರೆ ಗುರುತಿಸಬಲ್ಲೆ. ಆರೋಪಿ ಮತ್ತು ಬಂಗಾರದ ಗಟ್ಟಿಯನ್ನು ನೋಡಿದರೆ ಗುರುತಿಸುತ್ತೆನೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

Sd/-
ಮುಖ್ಯ ನಾಯಿಕ ದಂಡಾಧಿಕಾರಿಗಳು,
ಕಾರವಾರ